ಸುದ್ದಿ ಸಂಚಯ








# ಶಿವನಹಳ್ಳಿ ರಾಮಕೃಷ್ಣ ಮಿಷನ್ ಬಾಲಕರ ಪ್ರೌಢಶಾಲೆಯ ಶಿಲಾನ್ಯಾಸ

**ಬೆಂ**ಗಳೂರು ಗ್ರಾಮಂತರ ಜಿಲ್ಲೆಯ ಶಿವನಹಳ್ಳಿ ರಾಮಕೃಷ್ಣ ಮಿಷನ್ ೧೯೮೩ರಲ್ಲಿ ಆರಂಭವಾಯಿತು. ಬನ್ನೇರುಘಟ್ಟ ಸಂರಕ್ಷಿತ ಅರಣ್ಯಪ್ರದೇಶದ ಸುತ್ತಮುತ್ತಲ ನಿವಾಸಿಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಈ ಶಾಖಾಕೇಂದ್ರವನ್ನು ಆರಂಭಿಸಲಾಗಿದೆ. ಶೈಕ್ಷಣಿಕ, ಆರೋಗ್ಯ , ಗ್ರಾಮೀಣಾಭಿವೃದ್ಧಿ , ಬುಡಕಟ್ಟು ಜನಾಂಗಗಳ ಕಲ್ಯಾಣ, ಪರಿಸರ ಸಂರಕ್ಷಣೆ, ಸಾಂಸ್ಕೃತಿಕ ಮೊದಲಾದ ಕ್ಷೇತ್ರಗಳಲ್ಲಿ ಮಿಷನ್ ವ್ಯಾಪಕವಾದ ಕಾರ್ಯಚಟುವಟಿಕೆಗಳನ್ನು ನಡೆಸುತ್ತ ಬಂದಿದೆ. ಈ ಕೇಂದ್ರದಲ್ಲಿ ಒಂದು ಆಸ್ಪತ್ರೆ , ಪ್ರಾಥಮಿಕ ಶಾಲೆ, ವೃತ್ತಿ ತರಬೇತಿ ಕೇಂದ್ರ, ಇವುಗಳು ಕಾರ್ಯ ನಿರ್ವಹಿಸುತ್ತಿದ್ದು, ಇದರೊಂದಿಗೆ ಮಿಷನ್ ಗ್ರಾಮೀಣ ಮಹಿಳೆಯರ ಸ್ವ-ಸಹಾಯ ಸಂಘ ವೊಂದನ್ನು ಆಯೋಜಿಸುತ್ತಿದೆ. ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಹಿಂದುಳಿದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಉತ್ತಮ ಗುಣಮಟ್ಟದ ಪ್ರೌಢಶಾಲೆಯ ಹಲವು ದಿನಗಳ ಬೇಡಿಕೆಗೆ ಓಗೊಟ್ಟು, ಇದೀಗ ಬಾಲಕರಿಗೆ ಹಾಗೂ ಬಾಲಕಿಯರಿಗೆ ಸಿ.ಬಿ.ಎಸ್.ಸಿ. ಮಾದರಿಯ ಪ್ರತ್ಯೇಕ ಪ್ರೌಢಶಾಲೆಗಳನ್ನು ನಿರ್ಮಿಸಲು ಮಿಷನ್ ಮುಂದಾಗಿದೆ. ಬಾಲಕಿಯರ ಪ್ರೌಢಶಾಲೆಗೆ ಈಗಾಗಲೇ ಶಿಲಾನ್ಯಾಸ ನಡೆದಿದ್ದು, ಕಟ್ಟಡ ನಿರ್ಮಾಣ ಕಾರ್ಯ ಆರಂಭವಾಗಿದೆ. ಇದೀಗ ಬಾಲಕರ ಪ್ರೌಢಶಾಲೆಯ ಶಿಲಾನ್ಯಾಸ ಕೂಡ ನೆರವೇರಿದಂತಾಗಿದೆ.

೨೦೧೯ರ ಜೂನ್ ೨೭ರಂದು **ಶಿವನಹಳ್ಳಿ ರಾಮಕೃಷ್ಣ ಮಿಷನ್**ನ ಬಾಲಕರ ಪ್ರೌಢಶಾಲೆಯ ಶಿಲಾನ್ಯಾಸ ಕಾರ್ಯಕ್ರಮವು ನೆರವೇರಿತು. ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪ್ರಧಾನ ಕಾರ್ಯದರ್ಶಿಗಳಾದ **ಶ್ರೀಮತ್ ಸ್ವಾಮಿ ಸುವೀರಾನಂದಜಿ ಮಹಾರಾಜ್** ಶಿಲಾನ್ಯಾಸ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. ಪೂರ್ವಾಹ್ನ ೭.೩೦ ಕ್ಕೆ ನಿವೇಶನದ ಸಮೀಪ ಶ್ರೀರಾಮಕೃಷ್ಣರ ಪೂಜೆ ಹಾಗೂ ಹೋಮಗಳೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಪ್ರಧಾನ ಕಾರ್ಯದರ್ಶಿಗಳು ದಿವ್ಯತ್ರಯರಿಗೆ ಮತ್ತು ಶಿಲಾನ್ಯಾಸದ ಶಿಲೆಗೆ ಆರತಿ ಬೆಳಗಿ, ಪುಷ್ಪಾರ್ಚನೆ ಮಾಡಿದರು. ಶಿವನಹಳ್ಳಿ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳೂ, ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರೂ ಆದ ಶ್ರೀಮತ್ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಹಾಗೂ ರಾಮಕೃಷ್ಣ ಮಹಾಸಂಘದ ಇತರ ಆಮಂತ್ರಿತ ಸಂನ್ಯಾಸಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಾರ್ವಜನಿಕ ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿಯವರು ಪ್ರವಚನ ನೀಡಿದರು. ಬಳಿಕ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಸಮಾರೋಪ ಭಾಷಣ ಮಾಡಿದರು. ವಿವಿಧ ಶಾಖಾಕೇಂದ್ರಗಳಿಂದ ಬಂದ ಸುಮಾರು ೨೫ ಮಂದಿ ಸಂನ್ಯಾಸಿಗಳು ಹಾಗೂ ೧೦೦೦ ಮಂದಿ ಭಕ್ತರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮಗಳು ಮುಗಿದ ಮೇಲೆ ಪ್ರಸಾದ ವಿತರಣೆ ನಡೆಯಿತು.

ಸಾಯಂಕಾಲ ೫.೦೦ಕ್ಕೆ ಪ್ರಧಾನ ಕಾರ್ಯದರ್ಶಿಯವರು ನೂತನ **ಕಂಪ್ಯೂಟರ್ ವಿಭಾಗ**ವನ್ನು ಉದ್ಘಾಟಿಸಿದರು. ಅನಂತರ ಶಾಲೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಪ್ರಧಾನ ಕಾರ್ಯದರ್ಶಿಯವರೊಂದಿಗೆ ಶಿವನಹಳ್ಳಿ ಶಾಲೆಯ ಕಾರ್ಯ ಚಟು ವಟಿಕೆಗಳ ಬಗ್ಗೆ ಚರ್ಚಿಸಿದರು.






Managing Editor : Swami Muktidananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020